"ಮಧುರ ಮಕ್ಕಳೇ - ನಮ್ಮನ್ನು ಎಲ್ಲಾ ಬಂಧನಗಳಿಂದ ಬಿಡುಗಡೆ ಮಾಡಲು ತಂದೆ ಬಂದಿದ್ದಾರೆ, ನೀವು ಈಗ ಈ ಶೋಕವಾಟಿಕೆಯಿಂದ ಅಶೋಕವಾಟಿಕೆಯಲ್ಲಿ ಹೋಗುತ್ತೀರಿ, ಈ ವಿಷಯ ವೈತರ್ಣಿ ನದಿಯಿಂದ ಪಾರಾಗಿ ಹೋಗುತ್ತೀರಿ"

ಪ್ರಶ್ನೆ: ನೆನಪು ಮಾಡುವ ಸಮಯದಲ್ಲಿ ಯಾವ ವಿಷಯದ ವಿಘ್ನ ಆಗುತ್ತದೆ ಹಾಗೂ ಯಾವ ವಿಷಯದ ವಿಘ್ನ ಬರುವುದಿಲ್ಲ?

ಉತ್ತರ: ನೆನಪಿನಲ್ಲಿ ಕುಳಿತಿರುವ ಸಮಯದಲ್ಲಿ ಯಾವುದೇ ಶಬ್ದದ ಹಾಗೂ ಕೂಗುವ ವಿಘ್ನ ಬರುವುದಿಲ್ಲ, ಅಂತಹ ವಿಘ್ನ ಜ್ಞಾನದಲ್ಲಿ ಬರುತ್ತದೆ ಆದರೆ ನೆನಪಿನಲ್ಲಿ ಮಾಯೆಯ ವಿಘ್ನ ಅವಶ್ಯವಾಗಿ ಬರುತ್ತದೆ. ಮಾಯೆ ನೆನಪಿನ ಸಮಯದಲ್ಲಿಯೇ ವಿಘ್ನ ಹಾಕುತ್ತದೆ. ಅನೇಕ ಪ್ರಕಾರದ ಸಂಕಲ್ಪ-ವಿಕಲ್ಪಗಳನ್ನು ತೆಗೆದುಕೊಂಡು ಬರುತ್ತದೆ. ಆದ್ದರಿಂದ ಮಕ್ಕಳೇ ಎಚ್ಚರಿಕೆಯಿಂದಿರಿ ಎಂದು ತಂದೆಯು ಹೇಳುತ್ತಾರೆ. ಮಾಯೆಯ ಏಟನ್ನು ತಿನ್ನಬೇಡಿ. ಶಿವಬಾಬಾ ಯಾರು ನಿಮಗೆ ಅಪಾರ ಸುಖವನ್ನು ಕೊಡುತ್ತಾರೆಯೋ, ಸರ್ವ ಸಂಬಂಧದ ಸಾಕ್ರಿನ್ ಆಗಿದ್ದಾರೋ ಅವರನ್ನು ಬಹಳ-ಬಹಳ ಪ್ರೀತಿಯಿಂದ ನೆನಪು ಮಾಡಿ. ನೆನಪಿನಲ್ಲಿ ತೀಕ್ಷ್ಣವಾಗಿ ರೇಸ್ ಮಾಡಬೇಕು.

ಗೀತೆ: ರಾತ್ರಿಯ ಪ್ರಯಾಣಿಕನೇ ಸುಸ್ತಾಗಬೇಡ

ಓಂ ಶಾಂತಿ. ಯಾತ್ರೆಯಲ್ಲಿರುವ ಮಧುರಾತಿ ಮಧುರ ಮಕ್ಕಳೇ. ಯಾರು ಕುಳಿತಿರುತ್ತಾರೋ ಅವರಿಗೆ ಯಾತ್ರಿಕರು ಎಂದು ಹೇಳಲಾಗುತ್ತದೇನು. ಈ ಯಾತ್ರೆ ಎಷ್ಟು ವಿಚಿತ್ರವಾಗಿದೆ. ಶಾಂತಿಯ ಯಾತ್ರೆ, ಶಾಂತಿಧಾಮಕ್ಕೆ ಹೋಗುವ ಯಾತ್ರೆಯಾಗಿದೆ. ರಾವಣರಾಜ್ಯದಲ್ಲಿ ಮೋಸ ಹೋಗಿ ಸಾಯಬೇಕಾಗುತ್ತದೆ. ಸತ್ಯವಂತ ಸಾವಿತ್ರಿಯ ಕಥೆ ಒಂದು ಇದೆಯಲ್ಲವೇ, ಮೃತ್ಯುವಿಂದಲೂ ಸಾವಿತ್ರಿ ಸತ್ಯವಂತ ಆತ್ಮನನ್ನು ವಾಪಸ್ ಕರೆದುಕೊಂಡು ಬಂದಿದೆ. ವಾಸ್ತವಿಕವಾಗಿ ಅಂತಹ ವಿಷಯ ಯಾವುದೂ ಇಲ್ಲ. ಬಾಕಿ ಅರ್ಧಕಲ್ಪ ಮೃತ್ಯು ತಿಂದುಬಿಟ್ಟಿದೆ. ಅಂತ್ಯದಲ್ಲಿ ಬಂಧನ ಬರುತ್ತದೆಯಲ್ಲವೇ. ರಾವಣ ಯಾರನ್ನು ವರ್ಷ-ವರ್ಷ ಸುಡುತ್ತಾರೆಯೋ ಅವನು ನಮ್ಮ ಶತ್ರು ಆಗಿದ್ದಾನೆ, ಇದು ಗೊತ್ತಿಲ್ಲ. ಬಾಕಿ ಅರ್ಧ ಕಲ್ಪ ಮೃತ್ಯು ತಿಂದುಬಿಡುತ್ತದೆ. ನಿಮ್ಮನ್ನು ಶೋಕವಾಟಿಕೆಯಿಂದ ಹೊರತೆಗೆದು ಅಶೋಕವಾಟಿಕೆಗೆ ಎಲ್ಲಿ ಪೆಟ್ಟು ತಿನ್ನಬೇಕಾಗಿಲ್ಲವೋ ಅಲ್ಲಿಗೆ ಕರೆದುಕೊಂಡು ಹೋಗಲು ಬಂದಿದ್ದೇನೆ ಎಂದು ತಂದೆಯು ಹೇಳುತ್ತಾರೆ. ಇಲ್ಲಾದರೆ ಅನೇಕಪ್ರಕಾರದ ಬಂಧನ ಇದೆ. ತಂದೆ-ತಾಯಿ, ಪತಿ ಮಕ್ಕಳ ಪೆಟ್ಟನ್ನು ತಿನ್ನುತ್ತಿರುತ್ತಾರೆ. ಪತಿ ವಿಕಾರದಲ್ಲಿ ಸಿಲಿಕಿಹಾಕುತ್ತಾರೆ. ತಂದೆ ಬಂದು ಈ ಎಲ್ಲಾ ಬಂಧಗಳಿಂದ ಬಿಡುಗಡೆ ಮಾಡುತ್ತಾರೆ ಹಾಗೂ ಹೊಸ ಪ್ರಪಂಚಕ್ಕೆ ಕರೆದುಕೊಂಡು ಹೋಗುತ್ತಾರೆ. ಈಗ ಆತ್ಮನ ರೆಕ್ಕೆಗಳು ಮುರಿದುಹೋಗಿದೆ. ಆತ್ಮ ಹಾರಲು ಸಾಧ್ಯವಿಲ್ಲ. ಪುನಃ ನೆನಪಿನ ಯಾತ್ರೆ ಮಾಡಲು ಸಾಧ್ಯವಿಲ್ಲ. ಇದು ಬುದ್ಧಿಯೋಗದ ಯಾತ್ರೆಯಾಗಿದೆ, ಮನ್ಮನಾಭವ ಎಂದು ಬರೆಯಲಾಗಿದೆಯಲ್ಲವೇ. ಇದರ ಅರ್ಥವನ್ನು ಯಾವುದೇ ಯಾತ್ರಿಕರು ತಿಳಿದುಕೊಂಡಿದ್ದಾರೇನು. ರಾಮ ವಾನರ ಸೇನೆಯನ್ನು ತೆಗೆದುಕೊಂಡಿದ್ದಾರೆ ಹಾಗೂ ಆ ಕೋತಿಗಳು ಸೇತುವೆಯನ್ನು ತಯಾರು ಮಾಡಿದ್ದಾರೆಂದು ಹೇಳುತ್ತಾರೆ. ಕೋತಿಗಳು ಸೇತುವೆಯನ್ನು ಹೇಗೆ ಮಾಡುತ್ತಾರೆ. ಇದು ನಿಮ್ಮ ನೆನಪಿನ ಯಾತ್ರೆಯ ಸೇತುವೆ ತಯಾರಾಗುತ್ತಿದೆ, ಇದರಿಂದ ನೀವು ವಿಷಯವೈತರಣಿನದಿಯಿಂದ ಪಾರಾಗುತ್ತೀರಿ. ತಂದೆ ಈ ನದಿಯಲ್ಲಿ ಈಜಾಡುವುದನ್ನು ಕಲಿಸುತ್ತಾರೆ. ಅಂಬಿಗನಲ್ಲವೇ. ವಿಷಯವೈತರಣಿ ನದಿಯಿಂದ ಪಾರು ಮಾಡಿ ಶಿವಾಲಯಕ್ಕೆ ಕರೆದುಕೊಂಡು ಹೋಗುತ್ತಾರೆ. ಅಮೃತವನ್ನು ಬಿಟ್ಟು ವಿಷವನ್ನು ಕುಡಿದಿದ್ದಾರೆಂದು ಹೇಳುತ್ತಾರೆ. ಅಂದಾಗ ಜ್ಞಾನಕ್ಕೆ ಅಮೃತ ಎಂದು ಕರೆಯಲಾಗುತ್ತದೆ. ಜ್ಞಾನದಿಂದ ಸದ್ಗತಿ ಆಗುತ್ತದೆ. ಶಾಸ್ತ್ರಕ್ಕೆ ಜ್ಞಾನ ಎಂದು ಕರೆಯುವುದಿಲ್ಲ. ಅದು ಭಕ್ತಿಯ ಸಾಮಾಗ್ರಿಯಾಗಿದೆ. ಶಾಸ್ತ್ರವನ್ನು ಓದುವುದರಿಂದ ಸತ್ಯಯುಗ ಬರಲು ಸಾಧ್ಯವಿಲ್ಲ, ಸದ್ಗತಿ ಆಗಲು ಸಾಧ್ಯವಿಲ್ಲ. ಆದ್ದರಿಂದ ಅದಕ್ಕೆ ಜ್ಞಾನಾಮೃತ ಎಂದು ಕರೆಯಲು ಸಾಧ್ಯವಿಲ್ಲ, ಇದು ಭಕ್ತಿಯಾಗಿದೆ. ಜ್ಞಾನದಲ್ಲಿ ಮೊದಲು 100% ಸದ್ಗತಿ ಮತ್ತೆ ನಿಧ-ನಿಧಾನವಾಗಿ ಕೆಳಗೆ ಬರುತ್ತಾರೆ. ಸತ್ಯಯುಗದಲ್ಲಿಯೂ ದುರ್ಗತಿ ಆಗುತ್ತದೆ ಎಂದು ಹೇಳುವುದಿಲ್ಲ, ಅಲ್ಲಿ ದುರ್ಗತಿಯ ಹೆಸರು ಇರುವುದಿಲ್ಲ. ಕಲಿಯುಗದಲ್ಲಿ ಎಲ್ಲರ ದುರ್ಗತಿ ಆಗುತ್ತದೆ.

ಎಲ್ಲರ ಮೇಲೆ ದಯೆ ತೋರಿಸುವವರು ಒಬ್ಬ ತಂದೆ ಆಗಿದ್ದಾರೆ ಅವರಿಗೆ ಶ್ರೀ-ಶ್ರೀ ಎಂದು ಕರೆಯುತ್ತಾರೆಂದು ನಿಮಗೆ ಗೊತ್ತಿದೆ. ಮತ್ತೆ ಶ್ರೀ-ಶ್ರೀನ ಬಿರುದು ಎಲ್ಲರಿಗೂ ಕೊಟ್ಟಿಬಿಡುತ್ತಾರೆ. ದೇವತೆಯರಿಗೆ ಶ್ರೀ ಎಂದು ಹೇಳುತ್ತಾರೆ. ಶ್ರೀ ಲಕ್ಷ್ಮೀ-ನಾರಾಯಣ, ಶ್ರೀ ರಾಮ-ಸೀತೆ, ಅಂತಹ ಶ್ರೀಯನ್ನಾಗಿ ಮಾಡುವವರಿಗೆ ಶ್ರೀ-ಶ್ರೀ ಎಂದು ಕರೆಯಲಾಗುತ್ತದೆ. ನಾವು ಎಂದೂ ವಿಕಾರದಲ್ಲಿ ಹೋಗುವುದಿಲ್ಲ ಎಂದು ತಂದೆಯ ಮುಂದೆ ಪ್ರತಿಜ್ಞೆ ಮಾಡುತ್ತೀರಿ. ಒಂದುವೇಳೆ ಪ್ರತಿಜ್ಞೆ ಮಾಡಿ ತಪ್ಪು ಮಾಡಿದರೆ ತಂದೆಯ ರೈಟ್ ಹ್ಯಾಂಡ್ ಧರ್ಮರಾಜನು ಇದ್ದಾರೆ. ಧರ್ಮರಾಜ ಕ್ಷಮಿಸುವುದಿಲ್ಲ. ತಂದೆಯೂ ಗುಪ್ತವಾಗಿದ್ದಾರೆ, ಜ್ಞಾನವೂ ಗುಪ್ತವಾಗಿದೆ, ಪದವಿಯೂ ಸಹ ಗುಪ್ತವಾಗಿದೆ. ನಮಗೆ ಶ್ರೀಮತ ಕೊಡುವವರು ಯಾವುದೇ ಮನುಷ್ಯರು ಆಗಲು ಸಾಧ್ಯವಿಲ್ಲ ಎಂದು ನೀವು ಮಕ್ಕಳೇ ತಿಳಿದುಕೊಂಡಿದ್ದೀರಿ. ಪ್ರಜಾಪಿತ ಬ್ರಹ್ಮನ ಮೂಲಕ ತಂದೆ ರಚನೆಯನ್ನು ರಚಿಸುತ್ತಾರೆ. ಪ್ರಜಾಪಿತ ಸೂಕ್ಷ್ಮವತನದಲ್ಲಿ

ಇರುವುದಿಲ್ಲ. ಅವಶ್ಯವಾಗಿ ಇಲ್ಲಿಯೇ ಇರುತ್ತಾರೆ. ಬ್ರಹ್ಮಾನೇ ಈ ಸಮಯದಲ್ಲಿ ಬ್ರಾಹ್ಮಣನಾಗಿದ್ದಾರೆಂದು ತಾವು ಮಕ್ಕಳು ತಿಳಿದುಕೊಂಡುಬಿಟ್ಟಿದ್ದೀರಿ. ಇವರಿಗೆ ಭವಿಷ್ಯದಲ್ಲಿ ರಾಜ್ಯಭಾಗ್ಯ ಸಿಗುತ್ತದೆ. ದೇವತೆಗಳು ಪತಿತ ಪ್ರಪಂಚದಲ್ಲಂತೂ ರಾಜ್ಯ ಮಾಡಲು ಸಾಧ್ಯವಿಲ್ಲ. ಅಂದಾಗ ಹಳೆಯ ಪ್ರಪಂಚ ವಿನಾಶ ಆಗಬೇಕು ಅವಶ್ಯವಾಗಿ ವಿನಾಶ ಆಗುತ್ತದೆ. ಈಗ ಸ್ವಲ್ಪ ತಡವಾಗುತ್ತದೆ. ಈಗ ತಮ್ಮದು ಹೊಸ ರಾಜ್ಯದ ಸ್ಯಾಂಪಿಲಿಂಗ್ ಪೂರ್ತಿ ಆಗಲಿಲ್ಲ. ಮುಂಚೆ ತ್ವಮೇವ ಮಾತ್ಶ್ಚ-ಪಿತ. ಎಂದು ಹಾಡುತ್ತಿದ್ದರು. ಎಲ್ಲರ ಮುಂದೆ ಈ ಮಹಿಮೆಯನ್ನು ಮಾಡುತ್ತಾರೆ. ಸ್ವಲ್ಪನೂ ತಿಳಿದುಕೊಳ್ಳುವುದಿಲ್ಲ. ಒಳ್ಳೆಯದು ಬ್ರಹ್ಮಾ ಹೇಗೆ ತಾಯಿ ಆಗಲು ಸಾಧ್ಯ? ಎಂದು ಯೋಚನೆ ಮಾಡಿ. ಲಕ್ಷ್ಮೀ-ನಾರಾಯಣರ ರಾಜ್ಯವೂ ಸಹ ನಿಮ್ಮದು ನಡೆಯುತ್ತದೆ. ಅಂದಾಗ ಅವರಿಗೆ ತಂದೆ-ತಾಯಿ ಎಂದು ಕರೆಯುವುದಿಲ್ಲ. ಈ ಸಮಯದಲ್ಲಿ ಪರಮಪಿತ ಪರಮಾತ್ಮ ಪ್ರಾಕ್ಟಿಕಲ್ ರೂಪದಲ್ಲಿ ತಂದೆ-ತಾಯಿಯ ಪಾರ್ಟನ್ನು ಮಾಡುತ್ತಿದ್ದಾರೆ. ಮತ್ತೆ ಭಕ್ತಿಮಾರ್ಗದಲ್ಲಿ ಮಹಿಮೆ ಮಾಡಲಾಗುತ್ತದೆ. ಅದರಲ್ಲೂ ಶಿವಬಾಬಾ (ಸ್ಯಾಕ್ರಿನ್) ಆಗಿದ್ದಾರೆ. ಮನುಷ್ಯರೆಲ್ಲಾ ಆಸುರಿ ಮತದ ಮೇಲೆ ದುಃಖವನ್ನೇ ಕೊಡುತ್ತಾರೆ ಮತ್ತು ನಾನು ಎಲ್ಲರಿಗಿಂತ ಹೆಚ್ಚು ಸುಖ ಕೊಡುತ್ತೇನೆ. ನಾನು ದಾತನಾಗಿದ್ದೇನೆ. ಮಕ್ಕಳೇ ನೀವು ಎಷ್ಟು ನೆನಪಿನ ಯಾತ್ರೆಯಲ್ಲಿ ಇರುತ್ತೀರಿ, ಸ್ವದರ್ಶನ ಚಕ್ರವನ್ನು ತಿರುಗಿಸುತ್ತೀರಿ, ಕಮಲಪುಷ್ಪ ಸಮಾನರಾಗುತ್ತೀರಿ ಅಷ್ಟು ಶ್ರೇಷ್ಠ ಪದವಿಯನ್ನು ಪಡೆಯುತ್ತೀರಿ ಎಂದು ನಾನು ನೀವು ಮಕ್ಕಳಿಗೆ ಶ್ರೀಮತವನ್ನು ಕೊಡುತ್ತೇನೆ. ಈ ಅಲಂಕಾರದ ಅರ್ಥವನ್ನು ಯಾರೂ ತಿಳಿದುಕೊಳ್ಳಲು ಸಾಧ್ಯವಿಲ್ಲ. ಅಲಂಕಾರವನ್ನು ನೀವೇ ಧಾರಣೆ ಮಾಡುತ್ತೀರಿ. ಚಿಹ್ನೆಗಳನ್ನು ವಿಷ್ಣುವಿಗೆ ತೋರಿಸಿದ್ದಾರೆ. ಮೂರನೆಯ ನೇತ್ರವನ್ನೂ ಸಹ ದೇವತೆಗಳಿಗೆ ತೋರಿಸಿಬಿಟ್ಟಿದ್ದಾರೆ. ವಾಸ್ತವಿಕವಾಗಿ ಮೂರನೆಯ ನೇತ್ರ ನಿಮಗೆ ಸಿಗುತ್ತದೆ. ತ್ರಿನೇತ್ರಿ, ತ್ರಿಕಾಲದರ್ಶಿ.ಎನ್ನುವ ಶಬ್ದ ಇದೆಯಲ್ಲವೇ. ಇದರ ಅರ್ಥವೂ ಸಹ ಈಗ ಆತ್ಮರ ಬುದ್ಧಿಯಲ್ಲಿ ಇದೆ. ಆತ್ಮನ ಬುದ್ಧಿಯಲ್ಲಿ ಎಲ್ಲವೂ ಇರುವುದು. ನನ್ನ ಕಣ್ಣು, ಮೂಗು, ಕಿವಿ ಎಂದು ಶರೀರ ಹೇಳುವುದಿಲ್ಲ. ಇದು ನನ್ನ ಶರೀರ ರೂಪಿ ಮಹಲ್ ಎಂದು ಆತ್ಮನೇ ಹೇಳುವುದು. ನಾನು ಆತ್ಮನಲ್ಲಿ 84 ಜನ್ಮಗಳ ಪಾರ್ಟ್ ಅಡಕವಾಗಿದೆ ಎಂದು ಆತ್ಮನಿಗೆ ಗೊತ್ತಿದೆ. ಎಷ್ಟು ಗುಪ್ತ ಮಾತುಗಳಾಗಿವೆ. ಆತ್ಮಕ್ಕೆ ರಾಕೆಟ್ ಎಂದು ಕರೆಯುತ್ತಾರೆ, ಯಾವ ಆತ್ಮ ಶರೀರವನ್ನು ಬಿಟ್ಟು ಲಂಡನ್ ಹೋಗಬೇಕೆಂದರೆ ಸೆಕೆಂಡಿನಲ್ಲಿ ಹೊರಟುಹೋಗುತ್ತದೆ. ಅವರು ಎಷ್ಟು ತೀಕ್ಷ್ಣವಾದ ರಾಕೆಟ್ಟು ತಯಾರು ಮಾಡಿದ್ದಾರೆ ಬೆಳಗ್ಗೆ ಹೊರಟರೆ ಸಂಜೆಗೆ ತಲುಪಿಬಿಡುತ್ತದೆ. ಮುಂಚೆ ಸ್ಟೀಮರಲ್ಲಿ (ದೋಣಿ) 3-4 ತಿಂಗಳು ಹಿಡಿಸುತ್ತಿತ್ತು, ಈಗ ಒಂದು ತಿಂಗಳು ಹಿಡಿಯುತ್ತದೆ. ವಿಮಾನದಲ್ಲಿ ಒಂದು ದಿನ ಹಿಡಿಸುತ್ತಿತ್ತು. ಆದರೆ ಬಹಳ ತೀಕ್ಷ್ಣವಾದ ರಾಕೆಟ್ ಆಗಿದೆ, ಒಂದು ಸೆಕೆಂಡಿನಲ್ಲಿ ತಲುಪಿಬಿಡುತ್ತದೆ. ಅದನ್ನು ಯಾರೂ ನೋಡಲು ಸಾಧ್ಯವಿಲ್ಲ. ತಾವು ಆತ್ಮರದು ಆಲ್ರೌಂಡ್ ಪಾರ್ಟ್ ಆಗಿದೆ. ಒಳ್ಳೆಯದು ಪರಮಾತ್ಮನ ಪಾರ್ಟ್ ಏನಾಗಿದೆ? ದ್ವಾಪರದಿಂದ ಸಾಕ್ಷಾತ್ಕಾರ ಮಾಡಿಸುವ ಪಾರ್ಟ್ ಆಗಿದೆ, ಯಾರು ಯಾವ ಭಗವಂತನ ರೂಪವನ್ನು ನೆನಪು ಮಾಡುತ್ತಾರೋ, ಅವರ ಮನೋಕಾಮನೆಗಳನ್ನು ಪೂರ್ಣ ಮಾಡುತ್ತೇನೆ. ಈಗ ನನ್ನದು ಜ್ಞಾನ ಕೊಡುವ ಪಾರ್ಟ್ ಆಗಿದೆ, ಪತಿತರನ್ನು ಪಾವನರನ್ನಾಗಿ ಮಾಡುವ ಪಾರ್ಟ್ ಆಗಿದೆ. ನಿಮ್ಮನ್ನು ಮಾಸ್ಟರ್ ಜ್ಞಾನಸಾಗರ ಭಗವಂತನ ಮಕ್ಕಳು ಮಾಸ್ಟರ್ ಭಗವಂತನನ್ನಾಗಿ ಮಾಡುತ್ತೇನೆ. ಯಾರು ಕಲ್ಪದ ಹಿಂದೆ ಪುರುಷಾರ್ಥ ಮಾಡಿದ್ದಾರೆ ಅವರೇ ಮಾಡುತ್ತಾರೆ. ಮಕ್ಕಳೇ ಕಲ್ಪದ ಹಿಂದೆ ಬಂದಿದ್ದಿರಿ, ಈಗ ಪುನಃ ಆಸ್ತಿಯನ್ನು ಪಡೆದುಕೊಳ್ಳುತ್ತಿದ್ದೀರಿ. ಯಾರ ಹತ್ತಿರ? ತಂದೆ-ತಾಯಿ ಹತ್ತಿರ. ಸರಸ್ವತಿ ಎಲ್ಲರಿಗೆ ಮಾತಾ. ಅವರ ತಾಯಿ ಈ ಬ್ರಹ್ಮಾ. ಇವರ ತಾಯಿ ಯಾರೂ ಇರುವುದಿಲ್ಲ. ಶಿವಬಾಬಾ ಸ್ವಯಂ ಇವರು ನನ್ನ ಪತ್ನಿ ಎಂದು ಹೇಳುತ್ತಾರೆ ಅಂದಾಗ ಪತಿಯನ್ನು ಬಿಟ್ಟು ನಾನು ಹೇಗೆ ಊಟ ಮಾಡುವುದು ಎಂದು ಬ್ರಹ್ಮಾರವರು ಹೇಳುತ್ತಾರೆ. ಒಳ್ಳೆಯದು ಶಿವಬಾಬಾ ನಾನು ಒಟ್ಟಿಗೆತಿನ್ನುತ್ತೇವೆ. ನಶೆಯಂತೂ ಇರುತ್ತದೆಯಲ್ಲವೇ. ಬ್ರಹ್ಮಾಬಾಬಾ ಮಧ್ಯವರ್ತಿಯಾಗಿ ಬಂದಿದ್ದಾರೆ ಶಿವಬಾಬಾನ ಜೊತೆ ವಿವಾಹವನ್ನು ಮಾಡಿಸಲು ಎಂದು ತಾವೂ ಸಹ ಸ್ವಯಂ ಹೇಳುತ್ತೀರಿ. ತಾವು ಶ್ರೀಮತದ ಮೇಲೆ ಪರಮಾತ್ಮನ ಜೊತೆ ಎಲ್ಲರ ವಿವಾಹವನ್ನು ಮಾಡಿಸುತ್ತೀರಿ. ಪಂಡಿತರು ವಿಕಾರದ ಕಂಕಣವನ್ನು ಕಟ್ಟಿದ್ದಾರೋ ತಂದೆ ಅದನ್ನು ರದ್ದು ಮಾಡುತ್ತಾರೆ. ನೀವು ಜ್ಞಾನ ಚಿತೆಯ ಮೇಲೆ ಕುಳಿತುಕೊಂಡರೆ ಬೆಳ್ಳಗಾಗುತ್ತೀರಿ ಎಂದು ತಂದೆ ಹೇಳುತ್ತಾರೆ. ಕಾಮ ಚಿತೆಯ ಮೇಲೆ ಕುಳಿತು ನೀವು ಏಕೆ ಕಪ್ಪು ಮುಖ ಮಾಡಿಕೊಳ್ಳುತ್ತೀರಿ! ಶ್ಯಾಮ-ಸುಂದರರನ ಅರ್ಥ ನಿಮಗೆ ಗೊತ್ತಿದೆ. ಶ್ರೀಕೃಷ್ಣ ಸುಂದರವಾಗಿದ್ದವನು ಈಗ ಕಪ್ಪುಗಾಗಿಬಿಟ್ಟಿದ್ದಾನೆ. ಈಗ ತಂದೆ ಬಂದು ತಮ್ಮ ಪರಿಚಯವನ್ನು ಕೊಟ್ಟಿದ್ದಾರೆ.

ನೀವು ಪತಿತಪಾವನ ಗಾಡ್ ಫಾದರ್ನ ವಿದ್ಯಾರ್ಥಿಗಳಾಗಿದ್ದೀರಿ. ಇದು ಪಾಠಶಾಲೆಯಾಗಿದೆ. ಪಾಠಶಾಲೆಯಲ್ಲಿ ವಿದ್ಯೆ ಇರುತ್ತದೆ. ಪರಿಶ್ರಮ ಮಾಡಬೇಕಾಗುತ್ತದೆ ಹಾಗೂ ಆ ಸತ್ಸಂಗಗಳಲ್ಲಿ ಯಾವುದೇ ಪರಿಶ್ರಮವಿಲ್ಲ. ಅಲ್ಲಾದರೆ ಗೀತೆಯನ್ನು ಕೇಳಿ, ಗ್ರಂಥಗಳನ್ನು ಕೇಳಿ ಮನೆಗೆ ಹೋಗುತ್ತಾರೆ. ಅಲ್ಲಿ ಯಾರಾದರೂ ಪವಿತ್ರರಾಗಿ, ನೆನಪಿನ ಯಾತ್ರೆ ಮಾಡಿ ಎಂದು ಹೇಳುತ್ತಾರೇನು. ಮುಂದೆ ಹೋದಂತೆ ಈ ಎಲ್ಲಾ ಶಾರೀರಿಕ ಯಾತ್ರೆಗಳು ಸಮಾಪ್ತಿ ಆಗಿಬಿಡುತ್ತದೆ. ಪ್ರವಾಹ (ಫ್ಲಡ್ಸ್) ಇದ್ದರೆ ಅಥವಾ ಏಕ್ಸಿಡೆಂಟ್ ಆದರೆ ಯಾರೂ ಹೋಗುವುದಿಲ್ಲ ಏಕೆಂದರೆ ನಿಮ್ಮ ಯಾತ್ರೆ ಜೋರಾಗುತ್ತಾ ಹೋಗುತ್ತದೆ. ನಮ್ಮ ಯಾತ್ರೆ ಶಿವಾಲಯದ(ಸ್ವರ್ಗ) ಕಡೆ. ಶಿವಪುರಿ ಹಾಗೂ ವಿಷ್ಣುಪುರಿ ಎರಡಕ್ಕೂ ಶಿವಾಲಯ ಎಂದು ಹೇಳುತ್ತಾರೆ ಏಕೆಂದರೆ ಮುಕ್ತಿ-ಜೀವನ್ಮುಕ್ತಿ ಎರಡೂ ಶಿವಬಾಬಾನೇ ಕೊಡುತ್ತಾರೆ. ಅಂದಾಗ ಸತ್ಯ ದೈವೀ ಕುಲವನ್ನು ಶಿವಬಾಬಾ ಸ್ಥಾಪನೆ ಮಾಡುತ್ತಾರೆ.

ಒಳ್ಳೆಯದು-ನೆನಪಿನಲ್ಲಿ ಶಬ್ದದ ವಿಘ್ನ ಆಗುವುದಿಲ್ಲ. ಜ್ಞಾನ ಕೇಳುವುದರಲ್ಲಿ ಶಬ್ದದ ವಿಘ್ನ ಆಗುತ್ತದೆ. ಮನುಷ್ಯರು ಶಾಂತವಾಗಿರಿ, ಇಲ್ಲವೆಂದರೆ ನೆನಪಿನಲ್ಲಿ ವಿಘ್ನ ಬರುತ್ತದೆ ಎಂದು ಹೇಳುತ್ತಾರೆ. ಆದರೆ ಯೋಗದಲ್ಲಿ ಶಬ್ದ ವಿಘ್ನವನ್ನು ಹಾಕುವುದಿಲ್ಲ. ಮಾಯೆ ವಿಘ್ನ

ಹಾಕುವುದು. ಮಕ್ಕಳ ಜೊತೆ ಮಾಯೆಯ ಯುದ್ಧವಾಗಿದೆ. ಮಕ್ಕಳು ಯುದ್ಧದ ಮೈದಾನದಲ್ಲಿ ಸೋತುಹೋಗುವುದಿಲ್ಲ. ಮಾಯೆಯಂತೂ ಮುಳುಗಿಸಿಬಿಡುತ್ತದೆ. ಮಾಯೆ ಮೂಗು ಹಿಡಿದು ಮುಳುಗಿಸಿಬಿಟ್ಟರೆ ಬಿದ್ದುಹೋಗುತ್ತಾರೆ. ಮತ್ತೆ ನಿಂತುಕೊಳ್ಳುತ್ತಾರೆ ಮತ್ತೆ ಮೂಗಿನಮೇಲೆ ಹಾಕಿದರೆ ಬಿದ್ದು ಹೋಗುತ್ತಾರೆ. ಈ ಮಾಯೆ ಕಾಮ-ಕ್ರೋಧದ ಪೆಟ್ಟು ಕೊಡುತ್ತದೆ, ಇದರಿಂದ ಬಹಳ-ಬಹಳ ಎಚ್ಚರಿಕೆಯಿಂದ ಇರಬೇಕೆಂದು ತಂದೆಯು ಹೇಳುತ್ತಾರೆ. ಪೆಟ್ಟನ್ನು ತಿನ್ನಬಾರದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಜ್ಞಾನದ ಎಲ್ಲಾ ಅಲಂಕಾರಗಳನ್ನು ಧಾರಣೆ ಮಾಡಿ ಸ್ವದರ್ಶನ ಚಕ್ರಧಾರಿ, ತ್ರಿನೇತ್ರಿ, ತ್ರಿಕಾಲದರ್ಶಿ ಅರ್ಥಾತ್ ಮಾಸ್ಟರ್ ಗಾಡ್ ಆಗಬೇಕು.

2. ತಂದೆಗೆ ರೈಟ್ ಹ್ಯಾಂಡ್ ಧರ್ಮರಾಜನು ಸ್ಮೃತಿಯಲ್ಲಿ ಇಟ್ಟುಕೊಂಡು ಯಾವುದೇ ವಿಕರ್ಮವನ್ನು ಮಾಡಬಾರದು. ಪಾವನರಾಗುವ ಪ್ರತಿಜ್ಞೆ ಮಾಡಿ ವಿಕಾರದಲ್ಲಿ ಹೋಗಬಾರದು.

ವರದಾನ: ದೃಢ ಪ್ರತಿಜ್ಞೆಯ ಮುಖಾಂತರ ಹುಡುಗಾಟಿಕೆಯ ಲೂಸ್ ಸ್ಕ್ರೂ ವನ್ನು ಟೈಟ್ ಮಾಡುವಂತಹ ತೀವ್ರ ಪುರುಷಾರ್ಥಿ ಭವ

ಪ್ರತಿಜ್ಞೆಯಲ್ಲಿ ಲೂಸ್ ಆಗುವುದರ ಮೂಲ ಕಾರಣವಾಗಿದೆ - ಹುಡುಗಾಟಿಕೆ. ಹೇಗೆ ಎಷ್ಟೇ ದೊಡ್ಡ ಯಂತ್ರವಾದರೂ ಸಹ ಒಂದು ಸಣ್ಣ ಸ್ಕ್ರೂ ಲೂಸ್ ಆದಾಗ ಅದು ಇಡೀ ಯಂತ್ರವನ್ನೇ ನಿರುಪಯೋಗಿಯನ್ನಾಗಿ ಮಾಡಿಬಿಡುತ್ತದೆ, ಅದೇ ರೀತಿ ಪ್ರತಿಜ್ಞೆಯನ್ನು ಪೂರ್ಣ ಮಾಡಲು ಪ್ಲಾನ್ ಬಹಳ ಚೆನ್ನಾಗಿ ಮಾಡುವಿರಿ, ಪುರುಷಾರ್ಥವನ್ನೂ ಸಹ ಮಾಡುವಿರಿ ಆದರೆ ಪುರುಷಾರ್ಥ ಅಥವಾ ಪ್ಲಾನ್ ಬಲಹೀನ ಮಾಡುವ ಒಂದೇ ಒಂದು ಸ್ಕ್ರೂ ಆಗಿದೆ ಹುಡುಗಾಟಿಕೆ. ಅದು ಹೊಸ-ಹೊಸ ರೂಪದಲ್ಲಿ ಬರುವುದು. ಈ ಲೂಸ್ ಸ್ಕ್ರೂವನ್ನು ಟೈಟ್ ಮಾಡಿ. ನಾನು ತಂದೆಯಸಮಾನ ಆಗಲೇ ಬೇಕು-ಇದೇ ದೃಢ ಸಂಕಲ್ಪದಿಂದ ತೀವ್ರ ಪುರುಷಾರ್ಥಿಯಾಗಿಬಿಡುವಿರಿ.

ಸ್ಲೋಗನ್: ಬೇಹದ್ದಿನ ವೈರಾಗ್ಯ ವೃತ್ತಿಯೇ ಸಮಯದ ಸಮೀಪತೆಗೆ ಅಡಿಪಾಯವಾಗಿದೆ.

ಮಾತೇಶ್ವರಿಜೀಯವರ ಮಹಾವಾಕ್ಯ

ಈಗಂತೂ ಇಡೀ ಪ್ರಪಂಚ ತಿಳಿದಿದೆ - ಪರಮಾತ್ಮ ಒಬ್ಬರೆ ಆಗಿದ್ದಾರೆ, ಆ ಪರಮಾತ್ಮನನ್ನು ಕೆಲವರು ಶಕ್ತಿ ಎಂದು ತಿಳಿಯುತ್ತಾರೆ, ಕೆಲವರು ಪ್ರಕೃತಿ ಎಂದು ತಿಳಿಯುತ್ತಾರೆ ಅರ್ಥಾತ್ ಯಾವುದಾದರೂ ಒಂದು ರೂಪವೆಂದು ತಿಳಿದುಕೊಳ್ಳುತ್ತಾರೆ ಹಾಗಾದರೆ ಯಾವ ವಸ್ತುವನ್ನು ತಿಳಿದುಕೊಳ್ಳುತ್ತಾರೆ ಅವಶ್ಯವಾಗಿ ಯಾವುದೋ ಒಂದು ವಸ್ತುವಿದೆ ಆದ್ದರಿಂದಲೇ ಅವರ ಮೇಲೆ ಹೆಸರು ಇಡಲಾಗಿದೆ. ಆದರೆ ಆ ಒಂದು ವಸ್ತುವಿನ ಬಗ್ಗೆ ಈ ಪ್ರಪಂಚದಲ್ಲಿ ಎಷ್ಟು ಮನುಷ್ಯರಿದ್ದಾರೋ ಅಷ್ಟು ಮತಗಳಿವೆ, ಆದರೆ ಒಂದೇ ವಸ್ತುವಾಗಿದೆ ಅದರಲ್ಲಿ ಮುಖ್ಯ ನಾಲ್ಕು ಮತಗಳನ್ನು ಹೇಳುತ್ತೇವೆ - ಕೆಲವರು ಹೇಳುತ್ತಾರೆ ಈಶ್ವರ ಸರ್ವತ್ರನಾಗಿದ್ದಾನೆ, ಕೆಲವರು ಹೇಳುತ್ತಾರೆ ಬ್ರಹ್ಮನೇ ಸರ್ವತ್ರ, ಕೆಲವರು ಹೇಳುತ್ತಾರೆ ಎಲ್ಲಿ ನೋಡಿದರೆ ಅಲ್ಲಿ ಬ್ರಹ್ಮನೇ ಬ್ರಹ್ಮ, ಇನ್ನು ಕೆಲವರು ಹೇಳುತ್ತಾರೆ ಈಶ್ವರ ಸತ್ಯ, ಮಾಯಾ ಮಿಥ್ಯ. ಕೆಲವರು ಹೇಳುತ್ತಾರೆ - ಈಶ್ವರನೇ ಇಲ್ಲ, ಪ್ರಕೃತಿಯೇ ಪ್ರಕೃತಿಯಾಗಿದೆ. ನಂತರ ಈಶ್ವರನನ್ನು ಅವರು ಒಪ್ಪುವುದಿಲ್ಲ. ಇವಾಗಿವೆ ಹಲವಾರು ಮತಗಳು. ಅದಂತೂ ಪ್ರಕೃತಿಯಾಗಿದೆ ಎಂದು ತಿಳಿಯುತ್ತಾರೆ ಬಾಕಿ ಇನ್ನೇನು ಇಲ್ಲಾ. ಈಗ ನೋಡಿ ಜಗತ್ತನ್ನು ಒಪ್ಪುತ್ತಾರೆ ಆದರೆ ಯಾವ ಪರಮಾತ್ಮ ಜಗತ್ತನ್ನು ರಚನೆ ಮಾಡಿದ್ದಾರೆ ಆ ಜಗತ್ತಿನ ಮಾಲೀಕನನ್ನು ಒಪ್ಪುವುದಿಲ್ಲ. ಜಗತ್ತಿನಲ್ಲಿ ಎಷ್ಟು ಅನೇಕ ಮನುಷ್ಯರಿದ್ದಾರೆ ಅವರ ಇಷ್ಟೊಂದು ಮತಗಳು ಕೊನೆಗೂ ಈ ಎಲ್ಲಾ ಮತಗಳ ನಿರ್ಣಯ ಸ್ವಯಂ ಪರಮಾತ್ಮ ಬಂದು ಮಾಡುತ್ತಾರೆ. ಈ ಎಲ್ಲಾ ಜಗತ್ತಿನ ನಿರ್ಣಯ ಪರಮಾತ್ಮ ಬಂದು ಮಾಡುತ್ತಾರೆಯೋ ಅಥವಾ ಯಾರು ಸರ್ವೋತ್ತಮ ಶಕ್ತಿವಂತರಿದ್ದಾರೆಯೋ ಅವರೇ ತನ್ನ ರಚನೆಯ ನಿರ್ಣಯ ವಿಸ್ತಾರ ಪೂರ್ವಕವಾಗಿ ತಿಳಿಸುತ್ತಾರೆ. ಅವರೇ ನಮ್ಮನ್ನು ರಚನೆ ಮಾಡುತ್ತಾರೆ, ಅವರೇ ನಮ್ಮ ರಚನೆಯ ಪರಿಚಯವನ್ನು ಕೊಡುತ್ತಾರೆ ಹಾಗೂ ತನ್ನ ರಚನೆಯ ಪರಿಚಯವನ್ನೂ ಕೊಡುತ್ತಾರೆ.

ಕೆಲವು ಮನುಷ್ಯರು ಈ ರೀತಿ ಪ್ರಶ್ನೆ ಮಾಡುತ್ತಾರೆ - ನಾವು ಆತ್ಮವೆಂದು ಎಂದು ಹೇಗೆ ಸಾಬೀತು ಮಾಡುತ್ತೀರಿ. ಈಗ ಇದರ ಮೇಲೆ ತಿಳಿಸಲಾಗುತ್ತದೆ ಯಾವಾಗ ನಾವು ಹೇಳುತ್ತೇವೆ ನಾವು ಆತ್ಮ ಆ ಪರಮಾತ್ಮನ ಮಕ್ಕಳಾಗಿದ್ದೇವೆ ಎಂದು ಈಗ ಇದಾಗಿದೆ

ತನ್ನನ್ನು ತಾನು ಕೇಳಿಕೊಳ್ಳುವ ಮಾತು ನಾವು ಇಡೀ ದಿನದಲ್ಲಿ ನಾನು ಎಂದು ಹೇಳುತ್ತಿರುತ್ತೇವೆ ಅದು ಯಾವ ಪವರ್ ಆಗಿದೆ ಮತ್ತು ನಾವು ಯಾರನ್ನು ನೆನಪು ಮಾಡುತ್ತೇವೆ ಅವರು ನಮಗೆ ಏನಾಗಬೇಕಾಗಿದ್ದಾರೆ? ಯಾವಾಗಲೇ ಯಾರನ್ನೇ ನೆನಪು ಮಾಡಲಾಗುತ್ತದೆ ಎಂದರೆ ಅವಶ್ಯವಾಗಿ ನಾವಾತ್ಮಗಳಿಗೆ ಅವರ ಮೂಲಕ ಏನೋ ಬೇಕಿದೆ, ಪ್ರತಿ ಸಮಯ ಅವರ ನೆನಪು ಇರುವುದರಿಂದಲೇ ನಮಗೆ ಅವರ ಮೂಲಕ ಪ್ರಾಪ್ತಿಯಾಗುತ್ತದೆ. ನೋಡಿ ಮನುಷ್ಯರು ಏನೆಲ್ಲಾ ಮಾಡುತ್ತಾರೆ ಅವಶ್ಯವಾಗಿ ಯಾವುದೋ ಶುಭ ಇಚ್ಛೆ ಇದ್ದೇ ಇರುತ್ತದೆ, ಕೆಲವರಿಗೆ ಸುಖದ, ಕೆಲವರಿಗೆ ಶಾಂತಿಯ ಇಚ್ಛೆ ಇರುತ್ತದೆ ಎಂದ ಮೇಲೆ ಅವಶ್ಯವಾಗಿ ಯಾವಾಗ ಇಚ್ಛೆ ಉತ್ಪನ್ನವಾಗುತ್ತದೆ ಆಗ ಅವಶ್ಯವಾಗಿ ಯಾರೋ ತೆಗೆದುಕೊಳ್ಳುವವರಿದ್ದಾರೆ ಹಾಗು ಯಾರ ಮೂಲಕ ಆ ಇಚ್ಛೆ ಪೂರ್ಣವಾಗುತ್ತದೆ ಅವಶ್ಯವಾಗಿ ಕೊಡುವವರಿದ್ದಾರೆ ಆಗಲೇ ಅವರನ್ನು ನೆನಪು ಮಾಡಲಾಗುತ್ತದೆ ಈ ರಹಸ್ಯವನ್ನು ಪೂರ್ಣ ರೀತಿಯಲ್ಲಿ ತಿಳಿದುಕೊಳ್ಳಬೇಕು. ಅದು ಯಾವುದಾಗಿದೆ? ಈ ಮಾತನಾಡುವ ಶಕ್ತಿ ನಾನು ಸ್ವಯಂ ಆತ್ಮನಾಗಿದ್ದೇನೆ ಯಾವುದರ ಆಕಾರ ಜ್ಯೋತಿ ಬಿಂದುವಿನ ತರಹವಾಗಿದೆ, ಯಾವಾಗ ಮನುಷ್ಯ ಸ್ಥೂಲ ಶರೀರವನ್ನು ಬಿಡುತ್ತಾನೆ ಆಗ ಅದು ಹೊರಟು ಹೋಗುತ್ತದೆ. ಭಲೇ ಈ ಕಣ್ಣುಗಳಿಂದ ಕಾಣಿಸುವುದಿಲ್ಲ, ಈಗ ಇದರಿಂದ ಸಿದ್ಧವಾಗುತ್ತದೆ ಆತ್ಮದ ಸ್ಥೂಲ ಆಕಾರವಿಲ್ಲ ಆದರೆ ಮನುಷ್ಯ ಅನುಭೂತಿಯನ್ನು ಅವಶ್ಯವಾಗಿ ಮಾಡುತ್ತಾರೆ - ಆತ್ಮ ಬಿಟ್ಟು ಹೋಯಿತೆಂದು ಎಂದ ಮೇಲೆ ನಾವು ಅದನ್ನು ಆತ್ಮವೆಂದು ಹೇಳುತ್ತೇವೆ ಎಲ್ಲಿ ಆತ್ಮ ಜ್ಯೋತಿ ಸ್ವರೂಪವಾಗಿದೆ, ಅವಶ್ಯವಾಗಿ ಆ ಆತ್ಮಕ್ಕೆ ಜನ್ಮ ನೀಡುವವರು ಪರಮಾತ್ಮನೂ ಸಹ ಆತ್ಮನಂತೆಯೇ ಇದ್ದಾರೆ ಯಾರು ಹೇಗಿರುತ್ತಾರೆ ಅವರ ರಚನೆಯೂ ಅದೇ ರೀತಿಯಾಗಿರುತ್ತದೆ ಹಾಗಾದರೆ ನಾವು ಆತ್ಮಗಳು ಆ ಪರಮಾತ್ಮನನ್ನು ಏಕೆ ಸರ್ವ ಆತ್ಮರಿಗಿಂತ ಪರಮ ಎಂದು ಹೇಳುತ್ತೇವೆ ಏಕೆಂದರೆ ಅವರ ಮೇಲೆ ಯಾವುದೇ ಮಾಯೆಯ ಲೇಪ ಛೇಪವಾಗುವುದಿಲ್ಲ. ಬಾಕಿ ನಾವು ಆತ್ಮಗಳ ಮೇಲೆ ಮಾಯೆಯ ಲೇಪ ಛೇಪ ಅವಶ್ಯವಾಗಿ ಆಗುತ್ತದೆ. ಏಕೆಂದರೆ ನಾವು ಜನನ ಮರಣದ ಚಕ್ರದಲ್ಲಿ ಬರುತ್ತೇವೆ. ಈಗ ಇದಾಗಿದೆ ಆತ್ಮ ಹಾಗೂ ಪರಮಾತ್ಮನಲ್ಲಿ ಅಂತರ. ಒಳ್ಳೆಯದು. ಓಂ ಶಾಂತಿ.